# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 237 |
| 2 | ಸದಸ್ಯರ ಹೆಸರು | : | ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3 | ಉತ್ತರಿಸುವ ದಿನಾಂಕ | : | 06-03-2025 |
| 4 | ಉತ್ತರಿಸುವವರು | : | ಉಪ ಮುಖ್ಯಮಂತ್ರಿಗಳು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬಿ.ಬಿ.ಎಂ.ಪಿ. ವಾರ್ಡ್ ಸಂಖ್ಯೆ:100 ರಲ್ಲಿ ಬರುವ ನೇತಾಜಿ ಸುಭಾಷ್‌ಚಂದ್ರ ಬೋಸ್ ಉದ್ಯಾನವನದಲ್ಲಿ ಪ್ರತಿ ದಿನವು ಹಿರಿಯ ನಾಗರೀಕರು ಸೇರಿದಂತೆ ಸಾವಿರಾರು ಮಂದಿ ವಾಯು ವಿಹಾರ ಮಾಡುತ್ತಿದ್ದು, ಈ ಉದ್ಯಾನವನದಲ್ಲಿ ಸ್ವಚ್ಚತೆ, ಕಾವಲುಗಾರರ ವ್ಯವಸ್ಥೆ, ವಿದ್ಯುತ್ ದೀಪಗಳ ಅವ್ಯವಸ್ಥೆ ಇವೇ ಮುಂತಾದ ಹತ್ತು ಹಲವು ಸಮಸ್ಯೆಗಳು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು; (ವಿವರ ಒದಗಿಸುವುದು) | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ತೋಟಗಾರಿಕೆ ಪಶ್ಚಿಮ ವಲಯ ವ್ಯಾಪ್ತಿಯ ವಾರ್ಡ್ ಸಂಖ್ಯೆ:100 ರ ನೇತಾಜಿ ಸುಭಾಷ್ ಚಂದ್ರ ಬೋಸ್ ಉದ್ಯಾನವನದಲ್ಲಿ ಪ್ರತಿ ದಿನವು ಸ್ವಚ್ಚತೆ, ಕಾವಲುಗಾರರ ವ್ಯವಸ್ಥೆ ಹಾಗೂ ವಿದ್ಯುತ್ ದೀಪಗಳನ್ನು ನಿಯಮಿತವಾಗಿ ನಿರ್ವಹಿಸಲಾಗುತ್ತಿದೆ. ಈ ಉದ್ಯಾನವನವು ಕಿರು ಅರಣ್ಯ ಹೊಂದಿರುವ ಉದ್ಯಾನವನವಾಗಿದೆ. ಪ್ರತಿದಿನ ಸ್ವಚ್ಚತೆ ಕಾಪಾಡಲು 06 ಜನ ಕೆಲಸಗಾರರನ್ನು ನಿಯೋಜಿಸಲಾಗಿದೆ. ಪ್ರತೀ ವಾರ ಕಸವನ್ನು ಸಾಗಿಸಲಾಗುತ್ತಿದೆ ಹಾಗೂ ಎರಡು ಪಾಳಿಯಲ್ಲಿ ಕಾವಲುಗಾರರನ್ನು ನಿಯೋಜನೆ ಮಾಡಲಾಗಿದೆ. |
| ಆ) | ಬಿ.ಬಿ.ಎಂ.ಪಿ ಇತ್ತೀಚಿನ ಆದೇಶದಂತೆ ಉದ್ಯಾನವನಗಳು ಮಧ್ಯಾಹ್ನದ ವೇಳೆಯಲ್ಲಿಯೂ ಸಹ ಸಾರ್ವಜನಿಕರಿಗೆ ತೆರೆದಿಡಬೇಕು ಎಂಬ ನಿಯಮವಿದ್ದರೂ ಇಲ್ಲಿ ಹೆಚ್ಚಿನ ವೇಳೆಯಲ್ಲಿ ಉದ್ಯಾನವನಕ್ಕೆ ಬೀಗ ಹಾಕಿಡಲಾಗುತ್ತಿದ್ದು, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು; | ಬಿ.ಬಿ.ಎಂ.ಪಿ. ಇತ್ತೀಚಿನ ಆದೇಶದಂತೆ ಉದ್ಯಾನವನ ಗಳನ್ನು ಬೆಳಿಗ್ಗೆ 5.00 ಗಂಟೆಯಿಂದ ರಾತ್ರಿ 10.00 ಗಂಟೆಯವರೆಗೆ ತೆರೆಯಲು ವ್ಯವಸ್ಥೆ ಇದ್ದು, ಇದನ್ನು ಕಟ್ಟು ನಿಟ್ಟಾಗಿ ಪಾಲಿಸಲಾಗುತ್ತಿದೆ. ಮುಂದಿನ ದಿನಗಳಲ್ಲಿಯೂ ಸಹ ಈ ಆದೇಶದಂತೆಯೇ ನಿರ್ವಹಿಸಲಾಗುವುದು. |
| ಇ) | ಈ ಉದ್ಯಾನವನದಲ್ಲಿ ಸಂಗೀತದ ಯಂತ್ರೋಪಕರಣಗಳು ಹಾಗೂ ವ್ಯಾಯಾಮ ಪರಿಕರಗಳು ಹಲವಾರು ವರ್ಷಗಳಿಂದ ಕೆಟ್ಟು ನಿಂತಿದ್ದು ಸಾರ್ವಜನಿಕರ ಹಿತದೃಷ್ಟಿಯಿಂದ ಇವುಗಳನ್ನು ದುರಸ್ಥಿಗೊಳಿಸಲು ಕ್ರಮಕೈಗೊಳ್ಳಲಾಗುವುದೆ? | ಸದರಿ ಉದ್ಯಾನವನದಲ್ಲಿ ಸಂಗೀತದ ಯಂತ್ರೋಪಕರಣಗಳು ಮತ್ತು ವ್ಯಾಯಾಮ ಪರಿಕರಗಳನ್ನು ದುರಸ್ಥಿ ಮಾಡಲು ಕ್ರಮ ಕೈಗೊಳ್ಳಲಾಗಿದೆ. |

**ನಅಇ 98 ಎಂಎನ್‌ವೈ 2025 (ಇ)**

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿ